

# ಕಥೆಗಾರ ಕೊಂದ ಪಾತ್ರ

■ ಗೌರಿ



**ಹೆಸರು:** ವ್ಯಾಂಪಿರೊ (ಸ್ಪಾನಿಷ್)
**ನಿರ್ದೇಶನ:** ಆಲೆಕ್ಸ್ ಮೊಂಟೊಯಾ
**ಛಾಯಾಗ್ರಹಣ:** ಗೌಲೆಮ್ ಓಲಿವರ್
**ಧ್ವನಿ:** ಪೆಡ್ರೊ ಅವಿನೋ
**ತಾರಾಗಣ:** ಐರೆನ್ ಆ್ಯನುಲಾ, ಜಾರ್ಜ್ ಕಾಬ್ರೆರಾ

ಕಥೆ ಮತ್ತು ಕಥೆಗಾರನ ನಡುವಿನ ಸಂಬಂಧ ತುಂಬ ಸಂಕೀರ್ಣವಾದದ್ದು. ಅದರಲ್ಲಿ ಯಾರು ಯಾರನ್ನು ಎಷ್ಟು ನಿಯಂತ್ರಿಸುತ್ತಾರೆ ಎಂದು ಹೇಳುವುದು ಕಷ್ಟ. ಆ ಸಂಬಂಧದ ಹೆಣಿಗೆಯಲ್ಲಿ ಪ್ರಾಮಾಣಿಕತೆಯಿದ್ದ ಹಾಗೆಯೇ ಸೋಗಲಾಡಿತನವೂ ಅಡಿಗಡಿಗೇ ಅಡಗಿರುತ್ತದೆ. ಮಹಾನ್ ಮಾನವೀಯತೆಯ ಮುಖದಡಿಯಲ್ಲಿಯೇ ಕ್ರೌರ್ಯದ ಸರ್ಪ ಹೆಡೆಯಾಡಿಸುತ್ತಿರುತ್ತದೆ.

ಸ್ಪೈನ್ ದೇಶದ ಅಲೆಕ್ಸ್ ಮೊಂಟೊಯಾ ನಿರ್ದೇಶನದ ಕಿರುಚಿತ್ರ 'ವ್ಯಾಂಪಿರೊ', ಕಥಾಪಾತ್ರ ಮತ್ತು ಕಥೆಗಾರನ ನಡುವಿನ ಸಂಬಂಧದ ಸಂಕೀರ್ಣತೆಯನ್ನೂ ಅದರಡಿಯಲ್ಲಿಯೇ ಹೊಗೆಯಾಡುವ ಕ್ರೌರ್ಯದ ವಿಷಗಾಳಿಯನ್ನೂ ಬಹು ತಣ್ಣಗಿನ ಧ್ವನಿಯಲ್ಲಿ ತೆರೆದಿಡುತ್ತದೆ.

ಚಿತ್ರಕಥೆ ಬರಹಗಾರನೊಬ್ಬ ತನ್ನ ಪಾತ್ರದ ಕುರಿತು ಅಧ್ಯಯನಕ್ಕಾಗಿ ಒಬ್ಬಳು ವೇಶ್ಯೆಯನ್ನು ಸಂಧಿಸುತ್ತಾನೆ. 'ನಿನ್ನ ಬೆಲೆ ಎಷ್ಟೋ ಅಷ್ಟು ಕೊಡುತ್ತೇನೆ. ಆದರೆ ನಿನ್ನ ಜೊತೆ ಮಾತಾಡಬೇಕು. ಮತ್ತೇನೂ ಮಾಡುವುದಿಲ್ಲ' ಎಂಬ ಒಪ್ಪಂದದ ಮೇಲೆಯೇ ಅವರ ಮಾತುಕತೆ ಆರಂಭವಾಗುತ್ತದೆ.

ಚಿತ್ರಕಥಾ ಬರಹಗಾರನಿಗೆ ಆ ವೇಶ್ಯೆ ಒಂದು ಪಾತ್ರ ಅಥವಾ ಪಾತ್ರದ ಒಂದು ರೆಫರೆನ್ಸ್. ನೋಟ್‌ಬುಕ್ ಹಿಡಿದುಕೊಂಡು ಕೂತು ವಿವರಗಳನ್ನು ಕೇಳುತ್ತ ಹೋಗುವ ಅವನೆದುರು ಅವಳು ತನ್ನ ಬದುಕಿನ ಕಥೆಯನ್ನು ಹೇಳುತ್ತ ಹೋಗುತ್ತಾಳೆ. ಅವನೋ ಕೇಳುವ ಪ್ರಶ್ನೆಗಳಲ್ಲಿಯೇ ಅವಳು ಹೇಳಬೇಕಾದ ಕಥೆಯ ಮುಂದಿನ ನಡೆಯನ್ನು ನಿಯಂತ್ರಿಸಲು ಹವಣಿಸುತ್ತಾನೆ. 'ಗಂಡನಿಗೆ ವಿಚ್ಛೇದನ ಕೊಟ್ಟು ಇಲ್ಲಿಗೆ ಬಂದು ವೇಶ್ಯೆಯಾಗಿ ಕೆಲಸ ಮಾಡುತ್ತಿದ್ದೇನೆ. ಸಾಕಷ್ಟು ಹಣ ಗಳಿಸುತ್ತಿದ್ದೇನೆ. ನನಗಿಷ್ಟ ಬಂದ ಹಾಗೆ ಜೀವಿಸುತ್ತ ಚೆನ್ನಾಗಿದ್ದೇನೆ' ಎಂದು ಹೇಳಿದರೆ ಅವನಿಗೆ ಸಮಾಧಾನವಿಲ್ಲ. ಎಲ್ಲವೂ ಸಹಜವಾಗಿ, ಸುಖಮಯವಾಗಿದ್ದರೆ ಕಥೆಗಾರನಿಗೇನು ಕೆಲಸ? ಅವಳ ಬದುಕಿನ ಕಥೆಯ ದಿಕ್ಕನ್ನು ಬದಲಿಸಲು ಪರೋಕ್ಷವಾಗಿ ಯತ್ನಿಸುತ್ತಾನೆ. ಅವಳನ್ನು ಕೆಣಕುತ್ತಾನೆ; ಸಿಟ್ಟಿಗೆಬ್ಬಿಸುತ್ತಾನೆ. ಅವಳು ಮತ್ತೆ ಮತ್ತೊಂದು ದಿಕ್ಕಿನಲ್ಲಿ ಕಥೆಯನ್ನು ಹೇಳಲು ಶುರುಮಾಡುತ್ತಾಳೆ.

ಕನ್ನಡದ ಪ್ರಮುಖ ಕವಿ, ಕತೆಗಾರ ಜಯಂತ ಕಾಯ್ಕಿಣಿ, ವೇಶ್ಯೆಯ ಕುರಿತ ಪದ್ಯವೊಂದರಲ್ಲಿ 'ಅವಳು ತನ್ನ ಮುಡಿಯಿಂದ ಒಬ್ಬೊಬ್ಬರಿಗೆ ಒಂದೊಂದು ಚಂದದ ಹೆಸರನ್ನು ಹೂವಿನ ಹಾಗೆ ತೆಗೆದು ಹಂಚುತ್ತಿದ್ದಳು' ಎಂಬರ್ಥದ ಸಾಲುಗಳು ಬರುತ್ತವೆ. ಈ ಕಿರುಚಿತ್ರದ ನಾಯಕಿಯೂ ಹಾಗೆಯೇ. ಚಿತ್ರಕಥೆಗಾರನಿಗೆ ಇಷ್ಟವಾಗುವ ಹಾಗೆ ತನ್ನ ಬದುಕಿನ ಕಥೆಯನ್ನು ಹೊಸ ಹೊಸ ದಾರಿಗಳಲ್ಲಿ ಹೇಳುತ್ತಲೇ ಹೋಗುತ್ತಾಳೆ. ಒಮ್ಮೆ ಗಂಡನೊಡನೆ ವಿಚ್ಛೇದನ ಆಗಿದೆ ಎನ್ನುತ್ತಾಳೆ. ಇನ್ನೊಮ್ಮೆ ಗಂಡ ತೀರಿಕೊಂಡ ಎನ್ನುತ್ತಾಳೆ. ಇನ್ನೊಮ್ಮೆ ತಂದೆಗೆ ಅವನನ್ನು ಮದುವೆಯಾಗುವುದು ಇಷ್ಟವಿರಲಿಲ್ಲ ಎನ್ನುತ್ತಾಳೆ. ಮತ್ತೊಮ್ಮೆ ಮಗಳು ತನ್ನ ಅಮ್ಮನೊಡನೆ ಆರಾಮವಾಗಿ ಇದ್ದಾಳೆ ಎನ್ನುತ್ತಾಳೆ.

ಚಿತ್ರಕಥೆಗಾರನಿಗೆ ಇದೊಂದು ಆಟ. ವೇಶ್ಯೆಯ ಬದುಕನ್ನು ಅಧ್ಯಯನ ಮಾಡಲು ಬಂದ ಅವನು ಅವಳ ಬದುಕು ತಾನು ಇಷ್ಟಪಡುವಷ್ಟು ನಾಟಕೀಯವಾಗಿಯೇ ಇರಬೇಕು ಎಂದು ಪರೋಕ್ಷವಾಗಿ ನಿರ್ಬಂಧ ಹೇರುತ್ತಾನೆ. ಆದರೆ ಅವಳು ಹೊಸ ಹೊಸದಾಗಿ ಹೊಸೆಯುವ ಪ್ರತಿಯೊಂದು ಕಥೆಯಲ್ಲೂ ಜೀವಿಸುತ್ತಿರುತ್ತಾಳೆ; ಅನುಭವಿಸುತ್ತಿರುತ್ತಾಳೆ. ಅವುಗಳಲ್ಲಿ ನಿಜ ಯಾವುದು? ಸುಳ್ಳು ಯಾವುದು? ಅಥವಾ ತಾನು ಕಟ್ಟುವ ಕಥೆಗಳ ಮೂಲಕವೇ ತಾನು ಬದುಕಲು ಬಯಸಿದ್ದ ಬದುಕಿನ ಕನಸುಗಳನ್ನು ಅನುಭವಿಸುತ್ತಿದ್ದಾಳಾ?

ಹೀಗೆ ತಣ್ಣಗೇ ಸಾಗುವ ಕಿರುಚಿತ್ರ ಕೊನೆಯಲ್ಲಿ ಮಾತ್ರ ಬೆಚ್ಚಿಬೀಳಿಸುತ್ತದೆ. ಅದುವರೆಗೆ ಅವಳ ಕಥೆಯನ್ನು ಕೇಳುತ್ತ ಕೂತಿದ್ದವನಿಗೆ, ಅವಳನ್ನು – ತಲ್ಲಣದಲ್ಲಿರುವ ಅವಳನ್ನು – ಭೋಗಿಸಬೇಕು ಅನಿಸುತ್ತದೆ. ಮತ್ತಷ್ಟು ದುಡ್ಡು ತುರುಕಿ ಅವಳ ಮೇಲೆ ಅತ್ಯಾಚಾರವೆಸಗಿ ಹೊರಟುಹೋಗುತ್ತಾನೆ. ತನ್ನ ಕಥೆಯ ಪಾತ್ರದ ಮೇಲೆ ಕಥೆಗಾರನೇ ಅತ್ಯಾಚಾರ ಎಸಗುವ ವಿಪರ್ಯಾಸದೊಂದಿಗೆ ಕಿರುಚಿತ್ರ ಕೊನೆಗೊಳ್ಳುತ್ತದೆ.

ಕಥೆಯ ನಡಿಗೆಯಲ್ಲಿಯೇ ಹಲವು ಧ್ವನಿಶಕ್ತಿಗಳನ್ನು ದುಡಿಸಿಕೊಂಡಿರುವ ನಿರ್ದೇಶಕರು, ಅದನ್ನು ತಾಂತ್ರಿಕವಾಗಿಯಾಗಲಿ, ದೃಶ್ಯಸಂಯೋಜನೆಯಲ್ಲಾಗಲಿ ಹೇರುವ ಪ್ರಯತ್ನ ಮಾಡಿಲ್ಲ. ಹಾಗಾಗಿ ಈ ಚಿತ್ರಕ್ಕೊಂದು ಸಹಜಲಯ ಸಿದ್ಧಿಸಿದೆ. ಐರೆನ್ ಆ್ಯನುಲಾ ಮತ್ತು ಜಾರ್ಜ್ ಕಾಬ್ರೆರಾ ಅವರ ಅಭಿನಯವೂ ಈ ಕಿರುಚಿತ್ರದ ಪರಿಣಾಮಕಾರಿ ಅಂಶಗಳಲ್ಲಿ ಒಂದು. ತಾಂತ್ರಿಕತೆ ಎನ್ನುವುದು ಹಿನ್ನೆಲೆಯಲ್ಲಿ ನಿಂತು ಕಥನದ ಸೌಷ್ಟವಕ್ಕೆ ಹೇಗೆ ಆಧಾರವಾಗುತ್ತದೆ ಎನ್ನುವುದಕ್ಕೂ ಈ ಕಿರುಚಿತ್ರವನ್ನು ಉದಾಹರಣೆಯಾಗಿ ನೋಡಬಹುದು.

ಈ ಕಿರುಚಿತ್ರ ವೀಕ್ಷಣೆಗೆ **bit.ly/2kuh2dY** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.